

ರಾಜತನದ ಜೊತೆಗೆ ಹಾಸುಹೊಕ್ಕಾಗಿದೆ ಎನ್ನುತ್ತದೆ ಇತಿಹಾಸ. ಅಲ್ಲದೆ ಪರಂಪರೆಯ ಉಡುಗೆಯಾಗಿ ಇದು ಪರಿಗಣಿಸಲ್ಪಟ್ಟಿದೆ.

## ಆರಾಮದಾಯಕ

ಮಲ್ಮುಲ್ ಸೀರೆಯನ್ನು ಉಟ್ಟರೆ ಸೀರೆ ಉಟ್ಟಂತೆ ಅನಿಸುವುದಿಲ್ಲ. ಅಷ್ಟೊಂದು ಆರಾಮದಾಯಕ. ಈ ಸೀರೆಯ ಪ್ರಮುಖ ಪ್ಲಸ್ ಪಾಯಿಂಟ್ ಎಂದರೆ ಇದನ್ನು ವಾಷಿಂಗ್ ಮೆಷೀನ್‌ನಲ್ಲಿ ತೊಳೆಯಬಹುದು ಮತ್ತು ಇದನ್ನು ಇಸ್ತ್ರಿ ಮಾಡಬೇಕಿಲ್ಲ. ಬೇಸಿಗೆಗೆಂತೂ ಈ ಬಗೆಯ ಸೀರೆ ಹೇಳಿ ಮಾಡಿಸಿದಂತಿದೆ. ಚಳಿಗಾಲದಲ್ಲಿ ಬೆಚ್ಚನೆಯ ಅನುಭವವನ್ನೂ ಈ ಸೀರೆ ನೀಡುತ್ತದೆ. ಅಲ್ಲದೆ ಪ್ರಯಾಣದ ಸಂದರ್ಭದಲ್ಲಿ ತೊಟ್ಟುಕೊಳ್ಳಲು ಅನುಕೂಲಕರವಾಗಿದೆ.

ಮಲ್ಮುಲ್ ಬಟ್ಟೆಯಲ್ಲಿ ಕುರ್ತಿ ಸೂಟ್ ಮತ್ತು leಹೆಂಗಾ ಕೂಡ ಲಭ್ಯ. ವಿಭಿನ್ನ ಲುಕ್ ನೀಡುವ ಈ ಮಲ್ಮುಲ್ ಸೀರೆಗಳಲ್ಲಿ ಹಲವು ವೈವಿಧ್ಯಗಳೂ ಇವೆ. ವಿವಿಧ ರಾಜ್ಯಗಳಿಂದ ಮಲ್ಮುಲ್ ಹ್ಯಾಂಡ್ ಬ್ಲಾಕ್ ಪ್ರಿಂಟ್‌ಗಳನ್ನು ಪಡೆಯಬಹುದು. ಉದಾಹರಣೆಗೆ: ಆಂಧ್ರದಿಂದ ಕಲಂಕಾರಿ, ಕಚ್‌ನಿಂದ ಅಜ್ರಾಖ್, ಡೆಸ್ಸಾ, ಅಹಮದಾಬಾದ್‌ನಿಂದ ತರಕಾರಿ ಪ್ರಿಂಟ್‌ಗಳು, ಅಹಮದಾಬಾದ್‌ನ ಸೌದಾಗರಿ ಪ್ರಿಂಟ್‌ಗಳು, ರಾಜಸ್ಥಾನದಿಂದ ಸಂಗನೇರಿ ಬ್ಲಾಕ್ ಪ್ರಿಂಟ್, ಮಧ್ಯಪ್ರದೇಶದಿಂದ ಬಾಗ್ ಇತ್ಯಾದಿ ಹ್ಯಾಂಡ್ ಪ್ರಿಂಟ್‌ಗಳನ್ನು ಬಳಸಿ ಮಲ್ಮುಲ್ ಸೀರೆಗಳನ್ನು ವಿನ್ಯಾಸಗೊಳಿಸಬಹುದು.

## ಧರಿಸಲು ಹಿತ ಖಾದಿ ಸೀರೆ

ಖಾದಿ ಸೀರೆ ಎಂದರೆ ಅದನ್ನು ಉಟ್ಟುಕೊಳ್ಳಲು ಕಷ್ಟ, ಅದರ ನಿರ್ವಹಣೆ ಕಷ್ಟ ಎಂಬ ಭಾವನೆ ಅನೇಕರದ್ದು. ಅಲ್ಲದೆ ಖಾದಿ ಎಂದರೆ ದಪ್ಪ, ಒರಟು ಎಂಬ ಭಾವನೆಯೂ ಅನೇಕರಲ್ಲಿದೆ. ಬಿರು ಬಿಸಿಲು ಇದ್ದಾಗಲೂ, ಮೈಕೊರೆಯುವ ಚಳಿಯೇ ಇದ್ದರೂ ಖಾದಿ ಸೀರೆ ಧರಿಸಲು ಯಾವತ್ತೂ ಹಿತಕಾರಿಯೇ.

ಸೀರೆಗಳಲ್ಲಿ ರೇಷ್ಮೆ ಸೀರೆಗೆ ಅಗ್ರಪಟ್ಟ ಇದ್ದರೂ ಖಾದಿ ಸೀರೆಗೆ ಬೇಡಿಕೆ ಎಂದಿಗೂ ಕಡಿಮೆಯಾಗುವುದಿಲ್ಲ. ಹಿಂದೆಲ್ಲ ವಯಸ್ಸಾದವರು ಖಾದಿ ಸೀರೆ ಮಾತ್ರ ಉಡುತ್ತಾರೆ ಎಂಬ ಭಾವನೆ ಇತ್ತು. ಈ ಅನಿಸಿಕೆ ಈಗ ಬದಲಾಗಿದೆ. ಈಗ ಯುವತಿಯರೂ, ಫ್ಯಾಷನಬಲ್ ಆಗಿ ಕಾಣಬೇಕೆಂಬ ಮಹಿಳೆಯರು ಖಾದಿ ಸೀರೆಯತ್ತ ಹೆಚ್ಚಿನ ಒಲವು ತೋರಲಾರಂಭಿಸಿದ್ದಾರೆ. ಕಾಲೇಜಿಗೆ, ಕಚೇರಿಗೆ ಹೋಗುವ ಯುವತಿಯರಿಗೆ ಇದು ಅಚ್ಚುಮೆಚ್ಚಿನ ಸೀರೆಯೂ ಹೌದು.



‘ಮಲ್ಮುಲ್ ಸೀರೆಯಂತೆ ಖಾದಿ ಸೀರೆಯ ಮೂಲವೂ ಪಶ್ಚಿಮ ಬಂಗಾಳವೇ ಆಗಿದೆ ಅಲ್ಲದೆ ಪಶ್ಚಿಮ ಬಂಗಾಳ, ಛತ್ತೀಸ್‌ಗಡ ಮುಂತಾದ ರಾಜ್ಯಗಳಲ್ಲಿ ಅತ್ಯುತ್ತಮ ಗುಣಮಟ್ಟದ ಖಾದಿ ಸೀರೆಯೂ ಸಿಗುತ್ತದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಖಾದಿಯಿಂದ ನೇಯ್ದ ಸೀರೆ, ಕೈಮಗ್ಗದ ಸಲ್ವಾರ್‌ಗಳು ಹೊಸ ಆಕರ್ಷಕ ವಿನ್ಯಾಸಗಳಲ್ಲಿ ಸಿಗುತ್ತದೆ. ಆಧುನಿಕ ಜೀವನಶೈಲಿಗೆ ಒಗ್ಗುವಂತಹ ಖಾದಿ ಸೀರೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ. ಗುಣಮಟ್ಟದ ಖಾದಿ ಸೀರೆ ಎಷ್ಟೇ ದಿನಗಳಾದರೂ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ. ಖಾದಿ ಎಂದರೆ ತಂಪು. ಚಳಿಗಾಲಕ್ಕೆ ಬೆಚ್ಚನೆ ಅನುಭವ, ಸೆಕೆಗಾಲಕ್ಕೆ ತಣ್ಣಗಿನ ಭಾವ... ಇದು ಖಾದಿ ಸೀರೆಯ ವಿಶೇಷ’ ಎಂದು ಹೇಳುತ್ತಾರೆ ಖಾದಿ ಮತ್ತಿತರ ಹ್ಯಾಂಡ್‌ಲೂಮ್ ಸೀರೆಯ ಹಾಗೂ ಇತರ ಉಡುಪುಗಳ ವಿನ್ಯಾಸಕಿ ಬೆಂಗಳೂರಿನ ಹೇಮಾ ಶೆಟ್ಟಿ.

‘ಸೀರೆ ಮಾತ್ರವಲ್ಲದೆ ಚೂಡಿದಾರ್, ಕುರ್ತಾ, ಜುಬ್ಬ, ಲುಂಗಿ, ಬೆಡ್‌ಸ್ಪ್ರೆಡ್, ಬೆಡ್‌ಶೀಟ್‌ಗಳನ್ನೂ ಬಳಸಲಾಗುತ್ತದೆ. ಒಗೆದಷ್ಟೂ ಹಗುರವಾಗುವ ಈ ಬಟ್ಟೆ ಗುಣಮಟ್ಟದಲ್ಲಿ ಉತ್ತಮವಾಗುತ್ತಾ ಹೋಗುತ್ತದೆ. ಒಂದು ಸೀರೆ ತಯಾರಾಗಬೇಕಾದರೆ ನೇಕಾರರ ಶ್ರಮ ವಿಪರೀತ. ಹೀಗಾಗಿ ಇದಕ್ಕೆ ತೆರುವ ಬೆಲೆ ದುಬಾರಿ ಎನಿಸಲಾರದು. ಉಳಿದ ಬಟ್ಟೆಯಿಂದ ಕೈಚೀಲ, ಕುಶನ್ ಕವರ್, ಕುಚ್ಚು ಮುಂತಾದವನ್ನು ತಯಾರಿಸಬಹುದು’ ಎಂದು ವಿವರ ನೀಡುತ್ತಾರೆ ಅವರು.

ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಖಾದಿ ಸೀರೆ, ಸಲ್ವಾರ್, ದುಪಟ್ಟಾ, ಶಾಲು, ಪೈಜಾಮ ಎಲ್ಲವೂ ತೊಡಲು ಯೋಗ್ಯವಾದ ಉಡುಗೆಯೇ. ಕಾಲಕ್ಕೆ ತಕ್ಕಂತೆ ನಮ್ಮ ದಿರಿಸು ಬದಲಾದರೂ ಖಾದಿ ಬಟ್ಟೆಯಲ್ಲೂ ಮಾರ್ಪಾಡು ಆಗುತ್ತಿರುತ್ತದೆ. ಗುಣಮಟ್ಟ ಮಾತ್ರ ಅದೇ ರೀತಿಯಲ್ಲಿರುತ್ತದೆ.

‘ಸಿಂಥೆಟಿಕ್ ಸೀರೆ, ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಖಾದಿ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಹೇಮಾ ಅಭಿಮತ. ಬಡವರು ಬೇಕಾದರೂ ಖಾದಿ ಬಟ್ಟೆ ಧರಿಸಿ ಖುಷಿ ಪಡಬಹುದು. ಏಕೆಂದರೆ ಬಡವರಿಗೂ ಖಾದಿ ಉಡುಪು ಕೈಗೆಟುಕುವಂತಿದೆ. ಇದರಲ್ಲಿ Tರಾವರಿ ಬೆಲೆಯ ಉಡುಗೆ ತೊಡುಗೆ ಸಿಗುವುದರಿಂದ ಯಾರು ಬೇಕಾದರೂ ಇದನ್ನು ಕೊಳ್ಳಬಹುದು. ಸೌಂದರ್ಯ ಪ್ರಿಯರು ಹಾಗೂ ಫ್ಯಾಷನ್‌ಪ್ರಿಯರಿಗೆ ಖಾದಿ ಉಡುಪು ಆಪ್ಯಾಯಮಾನ. ಇದು ಸಖತ್ ಲುಕ್ ಹಾಗೂ ಗಂಭೀರತೆಯನ್ನು ಪ್ರತಿಬಿಂಬಿಸುವ ಉಡುಗೆ’ ಎನ್ನುತ್ತಾರೆ ಅವರು.

‘ಖಾದಿ ಸೀರೆ ಹಗುರವಾಗಿದ್ದು ತೊಟ್ಟುಕೊಳ್ಳಲು ಆರಾಮದಾಯಕವಾಗಿದೆ. ಇದು ಪ್ರೊಫೆಷನಲ್ ಲುಕ್ ನೀಡಲು ಸಹಕಾರಿ’ ಎನ್ನುತ್ತಾರೆ ಖಾದಿ ಬಟ್ಟೆಯನ್ನೇ ತೊಡುವ ಹಾಗೂ ಖಾದಿ ಉಡುಪನ್ನು ಬಹುವಾಗಿ ಪ್ರೀತಿಸುವ ಕಾಲೇಜು ವಿದ್ಯಾರ್ಥಿನಿ ದೀಕ್ಷಾ.

ಖಾದಿ ದುಪಟ್ಟಾ ಸೌಂದರ್ಯಕ್ಕೆ ಹೆಚ್ಚಿನ ಒತ್ತಾಸೆ ನೀಡುತ್ತದೆ. ಖಾದಿಯ ವಿವಿಧ ವಿಧಗಳಾದ ಫ್ಯಾಬ್ರಿಕ್ ಮಿಶ್ರಿತ ಖಾದಿ, ಶುದ್ಧ ಖಾದಿ ಬಳಸುವವರಿಗೆ ಮೆಚ್ಚುಗೆಯಾಗುವುದರಲ್ಲಿ ಸಂಶಯವಿಲ್ಲ.

ಖಾದಿ ಉಡುಗೆ ಬರೀ ಮಹಿಳೆಯರಿಗಷ್ಟೇ ಸೀಮಿತವಲ್ಲ. ಪುರುಷರು ಕೂಡ ಖಾದಿ ಪೈಜಾಮ ತೊಟ್ಟು ಸಖತ್ತಾಗಿ ಮಿಂಚುತ್ತಿದ್ದಾರೆ. ಸಣ್ಣ ಹುಡುಗರು, ಯುವಕರು ಖಾದಿ ಪೈಜಾಮ, ಜುಬ್ಬಾ ತೊಟ್ಟರೆ ಸಾಂಪ್ರದಾಯಿಕ ಲುಕ್ ಜತೆಗೆ ಕಳೆಕಳೆಯಾಗಿ ಕಾಣಬಹುದು. ಖಾದಿ ಬಟ್ಟೆಯಿಂದ ತಯಾರಿಸಿದ ಬ್ಯಾಗ್, ಪರ್ಸ್‌ಗಳು ಕೂಡ ಮಿಕ್ಸ್ ಅಂಡ್ ಮ್ಯಾಚ್ ಮಾಡುವವರಿಗೆ ಅನುಕೂಲ. ರೇಷ್ಮೆ, ಹತ್ತಿ, ಖಾದಿ, ಮಲ್ಮುಲ್ ಯಾವುದೇ ಸೀರೆ ಇರಲಿ, ಸಾಂಪ್ರದಾಯಿಕ ಆಧುನಿಕ ಎರಡೂ ರೀತಿಯ ಲುಕ್ ನೀಡುವಲ್ಲಿ ಇಂಥ ಸೀರೆಗಳ ಕೊಡುಗೆ ಅಪಾರ.